ಆ) 1. ರಾಜ್ಯ ಸರ್ಕಾರದಿಂದ ನೀಡುವ ಮಾಸಾಶನದ ವಿವರ:

ಎ) ರಾಜ್ಯ ಮಟ್ಟದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.300–00

ಬಿ) ರಾಷ್ಟ್ರ ಮಟ್ಟದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.400–00

ಸಿ) ಅಂತರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.600–00

2. ಕೇಂದ್ರ ಸರ್ಕಾರದಿಂದ ನೀಡುವ ಮಾಸಾಶನದ ವಿವರ:–

ಎ) ವರ್ಲ್ಡ್ ಕಪ್ಸ್, ವರ್ಲ್ಡ್ ಚಾಂಪಿಯನ್‌ಷಿಪ್, ಒಲಂಪಿಕ್ಸ್, ಏಷ್ಯನ್ ಗೇಮ್ಸ್, ಕ್ರೀಡೆಗಳಲ್ಲಿ ಚಿನ್ನದ ಪದಕ ಹಾಗೂ ಬೆಳ್ಳಿಯ ಪದಕ ಪಡೆದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.2500–00. ಕಂಚಿನ ಪದಕ ಪಡೆದ ಕ್ರೀಡಾಪಟುಗಳಿಗೆ ಪ್ರತಿ ಮಾಹೆಗೆ ರೂ.2000.00.

ಬಿ) ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಪಡೆದವರಿಗೆ ಪ್ರತಿ ಮಾಹೆಗೆ ರೂ.2000–00

ಸಿ) ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಪಡೆದವರಿಗೆ ಪ್ರತಿ ಮಾಹೆಗೆ ರೂ.2000

3. ರಾಜ್ಯದಲ್ಲಿ 535 ಕುಸ್ತಿ:ಕ್ರೀಡಾಪಟುಗಳು ಮಾಸಾಶನವನ್ನು ಪಡೆಯುತ್ತಿದ್ದಾರೆ.

4. 118 ಕುಸ್ತಿ:ಕ್ರೀಡಾಪಟುಗಳು ರಾಜ್ಯ ಸರ್ಕಾರದಿಂದ ನೀಡುವ ಮಾಸಾಶನ ಪಡೆಯಲು ಬಯಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ. ಜಿಲ್ಲಾವಾರು ವಿವಿರ ಕೆಳಕಂಡಂತಿದೆ.

1) ಧಾರವಾಡ	–	43
2) ಗದಗ್	–	02
3) ಹಾವೇರಿ	–	24
4) ದಾವಣಗೆರೆ	–	01
5) ಬೆಳಗಾಂ	–	13
6) ಬಾಗಲಕೋಟೆ	–	02
7) ಕೋಲಾರ	–	01
8) ಬೆಂಗಳೂರು	–	02
9) ಶಿವಮೊಗ್ಗ	–	12
10) ಚಿತ್ರದುರ್ಗ	–	01
11) ಚಿಕ್ಕಮಗಳೂರು	–	17
ಒಟ್ಟು		**118**

ರಾಜ್ಯದ ಬರ ಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ

2451(3215) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬರಕಾಮಗಾರಿಗಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ಎಷ್ಟು;

ಆ) ಈ ಹಣವನ್ನು ಯಾವ ಯಾವ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಇ) ಬಿಡುಗಡೆ ಮಾಡಿರುವ ಹಣದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ಈ) ಈ ಹಣವನ್ನು ಅಧಿಕಾರಿಗಳು ದುರುಪಯೋಗಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ದುರುಪಯೋಗಪಡಿಸಿಕೊಂಡಿರುವ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು?

ಉ) ಈ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ .ಎಂ (ಕಂದಾಯ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರವು 2002–03 ನೇ ಸಾಲಿನಲ್ಲಿ ಸಿ ಆರ್ ಎಫ್ ನಿಧಿಯಲ್ಲಿ ರೂ.61.66 ಕೋಟಿ ಮತ್ತು ಎನ್.ಸಿ.ಸಿ.ಎಫ್ ನಿಧಿಯಡಿಯಲ್ಲಿ ರೂ.196.88 ಕೋಟಿ 2003–04ನೇ ಸಾಳಿನಲ್ಲಿ ಎನ್.ಸಿ.ಸಿ.ಎಫ್. ನಿಧಿಯಡಿಯಲ್ಲಿ ರೂ.10.77 ಹಾಗೂ ಸಿ ಆರ್ ಎಫ್ ನಿಧಿಯಲ್ಲಿ ರೂ.32.37 ಕೋಟಿಯನ್ನು ಬಿಡುಗಡೆ ಮಾಡಿದೆ.

ಆ) ಪಟ್ಟಿಯನ್ನು ಅನುಬಂಧ–1ರಲ್ಲಿ ಲಗತ್ತಿಸಿದೆ.

ಇ) ಮಾಹಿತಿ ಅನುಬಂಧ–1 ರಲ್ಲಿದೆ.

ಈ) ಇಲ್ಲ.

ಉದ್ಭವಿಸುವುದಿಲ್ಲ.

ಉ) ಉದ್ಯೋಗ ಸೃಜನೆ ಕಾಮಗಾರಿಗಳಡಿಯಲ್ಲಿ ಜಲ ಸಂರಕ್ಷಣೆ ಮತ್ತು ಜಲಾನಯನ ಅಭವೃದ್ಧಿ ಕಾಮಗಾರಿಗಳಲ್ಲಿ ಭೂಸಾರ ಸಂರಕ್ಷಣ ಕಾಮಗಾರಿಗಳು, ಆಸ್ತಿ ನಿರ್ಮಾಣ ಕಾಮಗಾರಿಗಳು ಹಾಗೂ ರಸ್ತೆ ಅಭಿವೃದ್ಧಿ-ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

Annesure-II

Releases & Expenditure during 2002-03 & 2003-04 under CRF/NCCF

Sl. No.	Name of the District	2003-03		2003-04	
		Releases	Expenditure	Releases	Expenditure
1	2	3	4	5	6
1	Bangalore (U)	273.84	213.74	202.95	222.25
2	Bangalore (R)	628.89	403.36	448.75	456.22
3	Kolar	887.93	967.55	654.02	463.29
4	Tumkur	704.10	516.88	535.00	600.21
5	Chitradurga	556.45	761.71	356.75	253.68
6	Davanagere	608.30	609.00	371.50	179.26
7	Shimoga	631.65	510.74	372.85	353.63
8	Mysore	572.80	426.53	378.80	278.44
9	Chamarajanagar	382.45	261.05	264.07	123.15
10	Mandya	539.35	284.93	366.00	483.17
11	Chikmagalur	512.70	443.69	319.82	240.08
12	Hassan	637.10	681.48	504.87	422.56
13	Kodagu	52.90	283.24	114.00	112.55
14	D.Kannada	152.00	150.51	60.00	29.00
15	Udupi	102.00	74.66	35.00	29.87
16	Gulbarga	1036.00	948.23	588.38	651.65
17	Bidar	395.10	492.13	282.38	311.63
18	Raichur	474.10	412.59	296.25	151.60
19	Koppal	426.15	523.64	264.25	181.72
20	Bellary	640.65	674.39	441.58	310.52
21	Belgaum	990.30	941.19	824.25	608.04

1	2	3	4	5	6
22	Bijapur	427.40	537.66	288.80	275.59
23	Bagalkote	475.60	264.94	346.63	69.92
24	Dharwad	505.30	394.57	272.80	369.16
25	Gadag	507.30	470.68	307.75	245.43
26	Haveri	694.05	794.48	404.45	264.50
27	Uttara Kannada	511.20	573.48	322.38	196.36
28	RDED	255.00	254.47	0.00	0.00
29	B'lore City Corpn.	50.00	50.00	0.00	
30	Director, Agri.Dept.	1285.00	0.00	1000.00	0.00
31	Director,Hort.Dept.	15.00	0.00	0.00	0.00
32	Director, DMC	0.00	15.00	25.00	0.00
33	Int.Subsidy,Apex Bank	3300.00	0.00	0.00	0.00
	TOTAL	**19231.00**	**13936.52**	**10640.28**	**7883.48**

ಬೈಲಹೊಂಗಲ–ಗೋಕಾಕ ಮುಂಗೋಡ ರಸ್ತೆಯನ್ನು ಮೇಲ್ದರ್ಜೆಗೇರಿಸುವುದು

2459 (3146) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಈ ವರ್ಷ ಜಿಲ್ಲಾ ಮುಖ್ಯ ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನು ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದು;

ಆ) ಹಾಗಿದ್ದಲ್ಲಿ ಎಷ್ಟು ಕಿಮೀ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲಾಗುವುದು;

ಇ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಕಿ.ಮೀ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿರುವುದು;

ಈ) ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾ ಮುಖ್ಯ ರಸ್ತೆಯಾದ i.ಧಾರವಾಡ–ಬೈಲಹೊಂಗಲ ವಯಾ ಬುಡರಕಟ್ಟಿ

ii. ಯಲ್ಲಮನಗುಡ್ಡ–ಬೈಲಹೊಂಗಲ ವಯಾ ಉಡಿಕೇರಿ ಹಾಗೂ

iii. ಸವದತ್ತಿ–ಬೈಲಹೊಂಗಲ ವಯಾ ಹೊಸೂರು ರಸ್ತೆಗಳನ್ನು ರಾಜ್ಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೆ;

ಉ) ಜಿಲ್ಲಾ ಮುಖ್ಯ ರಸ್ತೆಯಾಗಿರುವ ಧಾರವಾಡ–ಬೈಲಹೊಂಗಲ ವಯಾ ದೊಡ್ಡವಾಡ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುವುದೆ.

ಊ) ಹೊರ ರಾಜ್ಯದಿಂದ ನಮ್ಮ ರಾಜ್ಯಕ್ಕೆ ಸೇರುವ ಜಿಲ್ಲಾ ಮುಖ್ಯ ರಸ್ತೆಯಾದ ಬೈಲಹೊಂಗಲ–ಗೋಕಾಕ ವಯಾ ಮುರಗೋಡ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಹೌದು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) 6613 ಕಿಮೀ ಉದ್ದದ ರಸ್ತೆಗಳನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಪ್ರಸ್ತಾವನೆ ಇದೆ.

ಇ) ಬೆಳಗಾವಿ ಜಿಲ್ಲೆಯಲ್ಲಿ 13.10.67 ಕಿಮೀ ಉದ್ದದ ರಸ್ತೆಗಳು ಜಿಲ್ಲಾ ಮುಖ್ಯ ರಸ್ತೆಯಾಗಿರುವುದು.